ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 20/01/2020

**ಹೊಸ ಕಟ್ಟಡ** ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಮಾಡಿ ಸಂಸದರ ಸಂಖ್ಯೆ 848ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರದ ಯೋಜನೆ?

# ತ್ರಿಕೋನಾಕಾರದಲ್ಲಿರಲಿದೆ ಹೊಸ ಸಂಸತ್!

## 1350 ಸಂಸದರು ಕೂರಲು ಇದರಲ್ಲಿ ಅವಕಾಶ। ಈಗಿರುವ ದಿಲ್ಲಿಯ ಸಂಸತ್ತಿನ ಪಕ್ಕವೇ ನಿರ್ಮಾಣ ಉದ್ದೇಶ

• ಏಜೆನ್ಸಿ ನವದೆಹಲಿ

ರಾಷ್ಟ್ರ ರಾಜಧಾನಿ ದೆಹಲಿಯ ಹೃದಯಭಾಗವಾದ ಸಂಸತ್ ಭವನ ಹಾಗೂ ಸುತ್ತಮುತ್ತಲಿನ ಕಚೇರಿಗಳಿರುವ 'ಸೆಂಟ್ರಲ್ ವಿಸ್ತಾ' ಪ್ರದೇಶದ ಮರುವಿನ್ಯಾಸ ಯೋಜನೆಯ ಭಾಗವಾಗಿ ಹೊಸ ತ್ರಿಕೋನ ಆಕಾರದ ಬೃಹತ್ ಸಂಸತ್ ಭವನ ತಲೆಯೆತ್ತಲಿದೆ. ವಿಶೇಷವೆಂದರೆ ಹೊಸ ಸಂಸತ್ ಭವನದಲ್ಲಿನ ಲೋಕಸಭೆಯು 900 ಸಂಸದರು ಕೂಡಬಹುದಾದಷ್ಟು ದೊಡ್ಡದಾಗಿರಲಿದೆ. ಅಲ್ಲದೆ, ಸಂಸತ್ತಿನ ಜಂಟಿ ಅಧಿವೇಶನ ನಡೆದರೆ ರಾಜ್ಯಸಭಾ ಸದಸ್ಯರು ಸೇರಿದಂತೆ 1,350 ಸಂಸದರು ಇಲ್ಲಿ ಕೂರಲು ಅವಕಾಶ ಸಿಗಲಿದೆ.

2022ರೊಳಗೆ ಈಗಿರುವ ಹಳೆಯ ಸಂಸತ್ ಭವನದ ಪಕ್ಕದಲ್ಲೇ ತ್ರಿಕೋನಾಕಾರದಲ್ಲಿ ಹೊಸ ಸಂಸತ್ ಭವನ ತಲೆಯೆತ್ತಲಿದೆ. ಪ್ರತಿ ಸಂಸದರಿಗೂ ಇಬ್ಬರು ಕುಳಿತುಕೊಳ್ಳಲು ಅವಕಾಶ ಇರುವಷ್ಟು ವಿಶಾಲವಾದ 'ಟು-ಸೀಟರ್' ಬೆಂಚ್ ಇರಲಿದೆ. » 5

### ಹೊಸ ಸಂಸತ್ ಕಟ್ಟಡದ ವಿಶೇಷಗಳು

- ಅಹ್ಮದಾಬಾದ್ ಮೂಲದ ಎಚ್‌ಸಿಪಿ ಕಂಪನಿಗೆ ಕಟ್ಟಡ ವಿನ್ಯಾಸ ಗುತ್ತಿಗೆ
- 2022ರ ವೇಳೆಗೆ ಹೊಸ ಕಟ್ಟಡ ನಿರ್ಮಾಣ ಗುರಿ
- ಜಂಟಿ ಅಧಿವೇಶನ ವೇಳೆ ಒಟ್ಟಿಗೆ 1350 ಜನ ಕೂರಲು ಅವಕಾಶ
- ಲೋಕಸಭೆಯ 900 ಸದಸ್ಯರು ಕುಳಿತು ಕಲಾಪ ನಡೆಸುವ ಸೌಲಭ್ಯ
- ಒಂದೊಂದು ಸೀಟೂ ಇಬ್ಬರು ಕುಳಿತುಕೊಳ್ಳುವಷ್ಟು ದೊಡ್ಡದು




### ಎಲ್ಲರಿಗಿಂತ ಮೊದಲೇ ತಿಳಿಯುವುದು ಇಲ್ಲೇ

ಹೊಸ ಸಂಸತ್ ಭವನ ನಿರ್ಮಾಣದ ಬಗ್ಗೆ ಜನವರಿ 1ರಂದು ಕನ್ನಡಪ್ರಭ ವರದಿ ಮಾಡಿತ್ತು.

**ತಲೆ ಎತ್ತಲಿದೆ ಹೊಸ ಸಂಸತ್ ಭವನ!**

ಮೂರು ಗೋಪುರ, ತ್ರಿಕೋನಾಕಾರ ಕಟ್ಟಡ
75ನೇ ಸ್ವಾತಂತ್ರ್ಯ ದಿನಕ್ಕೆ ಹೊಸ ಉಡುಗೊರೆ

### ಹೊಸ ಸಂಸತ್ ತ್ರಿಕೋನ ಆಕಾರದಲ್ಲಿರಲಿದೆ!

« ಮೊದಲ ಪುಟದಿಂದ

ಅಲ್ಲದೆ, ಸಂಸದರು ತಮ್ಮ ವಸ್ತುಗಳನ್ನು ಇಟ್ಟುಕೊಳ್ಳಲು ಪ್ರತ್ಯೇಕ ಡೆಸ್ಕ್‌ಗಳನ್ನು ಅದು ಹೊಂದಿರಲಿದೆ. ಅಧಿವೇಶನದ ಸಂದರ್ಭದಲ್ಲಿ ಸಾಲಾಗಿ ಕುಳಿತುಕೊಂಡಾಗ ಒಬ್ಬರನ್ನೊಬ್ಬರು ಸರಾಗವಾಗಿ ದಾಟಿ ಆಚೆಯಿಂದ ಈಚೆ, ಈಚೆಯಿಂದ ಆಚೆ ಓಡಾಡುವಷ್ಟು ವಿಶಾಲ ಜಾಗವು ಬೆಂಚ್‌ಗಳ ಮಧ್ಯೆ ಇರಲಿದೆ ಎಂದು ವರದಿಯೊಂದು ತಿಳಿಸಿದೆ. ಈಗಿನ ಲೋಕಸಭೆ ಇಕ್ಕಟ್ಟು ಎಂಬುದು ಸಂಸದರ ಅಳಲು. ಈ ಸಮಸ್ಯೆಗೆ ಹೊಸ ಲೋಕಸಭೆಯಲ್ಲಿ ಪರಿಹಾರ ಸಿಗಲಿದೆ ಎಂದು ಹೇಳಲಾಗುತ್ತಿದೆ. ಅಹಮದಾಬಾದ್ ಮೂಲದ ಎಚ್‌ಸಿಪಿ ಡಿಸೈನ್ ಮರುವಿನ್ಯಾಸ ಮಾಡುವ ಗುತ್ತಿಗೆ ಪಡೆದುಕೊಂಡಿದ್ದು, ಅದರ ಪ್ರಾತ್ಯಕ್ಷಿಕೆಯಲ್ಲಿ ಈ ಮಾಹಿತಿ ಗಳು ಇವೆ ಎಂದು ಪತ್ರಿಕೆಯೊಂದು ವರದಿ ಮಾಡಿದೆ. ಆದರೆ ಈಗ ಇರುವ ಸಂಸತ್ ಭವನದ ಸನಿಹವೇ ಹೊಸ ಸಂಸತ್ ಭವನ ತಲೆಯೆತ್ತಲಿದೆ.

**ದೊಡ್ಡ ಲೋಕಸಭೆಯ ಉದ್ದೇಶ ಏನು?:** ಲೋಕಸಭೆಗೆ ಈಗ 543 ಮಂದಿ ಸದಸ್ಯರಿದ್ದಾರೆ. ಆದರೆ 2026ರಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಕ್ಷೇತ್ರ ಮರುವಿಂಗಡಣೆ ಆಗುವ ಸಾಧ್ಯತೆ ಇದೆ. ಕ್ಷೇತ್ರ ಮರುವಿಂಗಡಣೆ ಆದರೆ ಲೋಕಸಭಾ ಕ್ಷೇತ್ರಗಳ ಸಂಖ್ಯೆ 848ಕ್ಕೆ ಏರಬಹುದು ಎಂಬುದು ರಾಜಕೀಯ ತಜ್ಞರ ಅಭಿಪ್ರಾಯ. ಹೀಗಾಗಿ 900 ಸದಸ್ಯರು ಕೂಡಬಹುದಾದ ಲೋಕಸಭೆಯ ನಿರ್ಮಾಣ ಮಾಡುವುದು ಸರ್ಕಾರದ ಉದ್ದೇಶ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಾಜಿ ರಾಷ್ಟ್ರಪತಿ ಪ್ರಣಬ್. ಮುಖರ್ಜಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 1000 ಆಗಬೇಕು ಎಂದು ಕರೆ ನೀಡಿದ್ದು ಇಲ್ಲಿ ಗಮನಾರ್ಹ.